॥ಶ್ರೀ ಗುರುಭ್ಯೋ ನಮಃ॥

ಕರುಣಿಸು ಜಯೇಶ ವಿಠಲ। ವರ ಅಂಕಿತವಿದನು ಇತ್ತೆ ॥ ಪ ॥
ತರುಳ ನಿನ್ನವನೆಂದು ।  ಗುರುವಾತ ಸ್ಥಿತನಾಗಿ । ಭರದಿ ಪಾಲಿಸಿದೆ ಇವನ ।
ಹರಿ ನೀ ನಿದ್ದೆಡೆಗೆ ಕರೆಸಿ ॥ ಅ.ಪ ॥

ಇರಿಸು ವರ್ಣಾಶ್ರಮ ವರಧರ್ಮ ಕರ್ಮಗಳಲ್ಲಿ, ಮರೆಸಿ ಕಾಮ್ಯ ಕರ್ಮಗಳೆಲ್ಲವನ್ನು,
ಸ್ಮರಿಸದಂತೆ ಮಾಡು ಪರಸತಿಯರೊಲಿಮೆ, ಮರೆಯದಂತಿರಲಿ ಪರತತ್ವವನ್ನು ॥ ೧॥

ಅತಿಥಿ ಅಭ್ಯಾಗತರ ಪೂಜೆ ಸತಿ ಸುತ ಪರಿವಾರದಿ ಕೃತ ಕೃತ್ಯನಾಗಿ ಮಾಡಿಸಿ,
ಪತಿತರಾ ಸಹವಾಸ ಹಿತವೆಂದರುಪದೇ, ಸದ್ಗತಿ ನೀವ ಮಾರ್ಗ ತಿಳಿಸಿ ॥ ೨॥

ನಿರುತ ತತ್ವ ನಿಶ್ಚಯದಲ್ಲಿ ಜ್ಞಾನ, ಗುರುಹಿರಿಯರಲಿ ಭಕ್ತಿ, ದುರ್ವಿಷಯದಲಿ ವಿರಕ್ತಿನಿತ್ತು,
ವರ ವಿಜಯ ರಾಮಚಂದ್ರ। ವಿಠಲ ಸುರರೊಡೆಯ ಒರೆದು ನಾಮಾಮೃತವ ನುಡಿಸಿ ॥೩॥

॥ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು ॥